# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರರ ಸಂಕಷ್ಟ ಪರಿಹಾರ ನಿಧಿಗೆ ಅಂಶದಾನ-ಸಂತ್ರಸ್ಥರಿಗೆ ಪರಿಹಾರ ನೀಡಲು 2010-11ನೇ ಸಾಲಿನಲ್ಲಿ ರೂ.25.00 ಲಕ್ಷ ಅನುದಾನ ಬಿಡುಗಡೆಗೊಳಿಸುವಿಕೆ.

ಓದಲಾಗಿದೆ:- 1) ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ/98/ಎಸ್‌ಎಫ್‌ಎಸ್/73 ದಿನಾಂಕ:23-03-1974.
2) ಆದೇಶ ಸಂಖ್ಯೆ:ಪಸಂಮೀ/65/ಮೀಇಂಯೋ/2010 ದಿನಾಂಕ:08-04-2010.
3) ಪತ್ರ ಸಂಖ್ಯೆ:ಮೀಸಾಕ/40/2010-11 ದಿನಾಂಕ:01-07-2010.

******

## ಪ್ರಸ್ತಾವನೆ:

ನೈಸರ್ಗಿಕ ವಿಕೋಪಗಳಿಂದ ಅಪತ್ತಿಗೀಡಾಗುವ ಮೀನುಗಾರರಿಗೆ ತುರ್ತಿನ ಸಮಯದಲ್ಲಿ ನೆರವು ನೀಡಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮಾನ್ಯ ಮೀನುಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ಈ ನಿಧಿಗಾಗಿ ಹಣವನ್ನು ಸಾರ್ವಜನಿಕರಿಂದ, ಮೀನುಗಾರರ ಸಹಕಾರ ಸಂಘಗಳಿಂದ ಹಾಗೂ ಮೀನುಗಾರಿಕೆ ಇಲಾಖೆಯಿಂದ ವಂತಿಗೆ/ಕೊಡುಗೆ ರೂಪದಲ್ಲಿ ಸಂಗ್ರಹಿಸಲಾಗುತ್ತಿದ್ದು, ಈ ಮೂಲಗಳಿಂದ ಸದರಿ ನಿಧಿಗೆ ಸಾಕಷ್ಟು ಪ್ರಮಾಣದಲ್ಲಿ ಹಣವು ಸಂಗ್ರಹವಾಗುತ್ತಿಲ್ಲ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಸದರಿ ಯೋಜನೆಯನ್ನು 2010-11ನೇ ಸಾಲಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ, ಮೀನುಗಾರಿಕೆ ನಿರ್ದೇಶಕರು ಇತ್ತೀಚಿನ ವರ್ಷಗಳಲ್ಲಿ ಪ್ರಾಕೃತಿಕ ವಿಕೋಪಗಳಿಂದ ಮೀನುಗಾರರ ಸಂಕಷ್ಟಗಳು ಹೆಚ್ಚಾಗುತ್ತಿರುವುದಲ್ಲದೆ, ಕೆಲವೊಮ್ಮೆ ಮೀನುಗಾರರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿರುವುದನ್ನು ಗಮನಿಸಿ, ತುರ್ತು ಪರಿಸ್ಥಿತಿಯಲ್ಲಿ ಅಂತಹ ಸಂತ್ರಸ್ಥರಿಗೆ ಇಲಾಖೆಯ ವತಿಯಿಂದ ತುರ್ತು ಆರ್ಥಿಕ ನೆರವನ್ನು ನೀಡಬೇಕಾದ ಅವಶ್ಯಕತೆಯನ್ನು ಮನಗೊಂಡು ಅದಕ್ಕಾಗಿ ಸ್ಥಾಪಿಸಲಾಗಿರುವ ನಿಧಿಯಲ್ಲಿ ಸಾಕಷ್ಟು ಹಣದ ಸಂಗ್ರಹಣೆ ಇರಬೇಕೆಂದು ತೀರ್ಮಾನಿಸಲಾಗಿರುತ್ತದೆ. ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಮೀನುಗಾರರ ಮೃತ ಪ್ರಕರಣಗಳಲ್ಲಿ ಸಂತ್ರಸ್ಥರಿಗೆ ನೀಡುತ್ತಿದ್ದ ಪರಿಹಾರ ಮೊತ್ತವನ್ನು ರೂ.25,000-00 ಗಳಿಂದ ರೂ.50,000-00ಗಳಿಗೆ ದಿನಾಂಕ:01-01-97 ರಿಂದ ಹೆಚ್ಚಿಸಲಾಗಿದೆ. ದಿನಾಂಕ:27-01-97ರಂದು ನಡೆದ ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಭೆಯು ಮೀನುಗಾರಿಕೆ ನಡೆಸುವ ಸಂದರ್ಭಗಳಲ್ಲದೆ ಇತರೆ ಸಂದರ್ಭಗಳಲ್ಲಿಯೂ ಅಂದರೆ ರಸ್ತೆ ಅಪಘಾತ ಪ್ರಕರಣಗಳಲ್ಲಿ ಮೀನುಗಾರರು ಮೃತರಾದರೆ, ಮೃತರ ವಾರಸುದಾರರಿಗೆ ಪರಿಹಾರ ನೀಡಲು ನಿರ್ಣಯಿಸಿರುತ್ತದೆ. ಅಲ್ಲದೆ, ಇತರೆ ಪ್ರಾಕೃತಿಕ ವಿಕೋಪಗಳಿಂದ ಮುಂದೆ ಸಂಭವಿಸಬಹುದಾದ ಮೀನುಗಾರಿಕೆ ಅನಾಹುತಗಳಿಂದ ಸಂಕಷ್ಟಕ್ಕೆ ಒಳಗಾಗುವ ಮೀನುಗಾರರ ಕುಟುಂಬಗಳಿಗೆ ನಿಧಿಯಿಂದ ತುರ್ತು ಪರಿಹಾರ ನೀಡಬೇಕಾದ ಅಗತ್ಯ ಉಂಟಾಗಬಹುದಾಗಿದ್ದು,

ಅದಕ್ಕಾಗಿ ನಿಧಿಯಲ್ಲಿ ಸಾಕಷ್ಟು ಹಣ ಸಂಗ್ರಹಿಸಬೇಕಾದ ಕಾರಣ 2010-11ನೇ ಸಾಲಿನ ಆಯವ್ಯಯದಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಲಾಗಿರುವ ರೂ.50.00ಲಕ್ಷ ಅನುದಾನವನ್ನು ಸದರಿ ನಿಧಿಗಾಗಿ ಉಪಯೋಗಿಸಿಕೊಳ್ಳಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 158 ಮೀಇಂಯೋ 2010, ಬೆಂಗಳೂರು ದಿನಾಂಕ:16-08-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿಗಾಗಿ 2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ.50.00 ಲಕ್ಷಗಳ ಪೈಕಿ ಪ್ರಸ್ತುತ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಅನುದಾನವನ್ನು ಲೆಕ್ಕ ಶೀರ್ಷಿಕೆ "2405-00-103-0-15-104 ಅಂಶದಾನಗಳು (ಯೋಜನೆ)" ಅಡಿಯಲ್ಲಿ ರೂ.15.00 ಲಕ್ಷ; "2405-00-103-0-15-422 ವಿಶೇಷ ಘಟಕ ಯೋಜನೆ (ಯೋಜನೆ)" ಅಡಿಯಲ್ಲಿ ರೂ.7.50 ಲಕ್ಷ ಹಾಗೂ "2405-00-103-0-15-423 ಗಿರಿಜನ ಉಪಯೋಜನೆ (ಯೋಜನೆ)" ಅಡಿಯಲ್ಲಿ ರೂ.2.50 ಲಕ್ಷ ಹೀಗೆ ಒಟ್ಟು ರೂ.25.00 ಲಕ್ಷ (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

ಈ ಹಣವನ್ನು ಪೇಯಿಸ್ ರಸೀದಿ ಬಿಲ್ಲುಗಳ ಮೂಲಕ ರಾಜ್ಯ ಹುಜೂರ್ ಖಜಾನೆಯಿಂದ ತೆಗೆಯಲು ಹಾಗೂ ಮೀನುಗಾರಿಕೆ ನಿರ್ದೇಶಕರವರ ಹೆಸರಿನಲ್ಲಿ ಸಂಕಷ್ಟ ಪರಿಹಾರ ನಿಧಿ ಖಾತೆಯಲ್ಲಿಡಲು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಕೃತೋಇ/50/ ಆಂಆಸ/2010 ದಿನಾಂಕ:09-08-2010ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಂ.ರಾಜಣ್ಣ) 16/8
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

16/8

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1)(ಎಯು-2),ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
4) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4).
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.